ತೊಡಗಿದಾಗ ಒಳಗೇ ರೂಪುಗೊಳ್ಳುವ ನುಡಿಪ್ರಧಾನ ಕಥನ ಕ್ರಿಯೆಯ ಸ್ವರೂಪ ಬೇರೆ. ಸಿನಿಮಾ ಚಿತ್ರಕತೆ ಬರೆಯುವಾಗ ರೂಪುಗೊಳ್ಳುವ ಕಥನ ಕ್ರಿಯೆಯ ಸ್ವರೂಪ ಬೇರೆ. ಸಿನಿಮಾವನ್ನು ದೃಶ್ಯಾತ್ಮಕವಾಗಿಯೇ ಯೋಚಿಸಬೇಕಾಗುತ್ತದೆ. ಚಿತ್ರಿಕೆ(ಶಾಟ್ಸ್)ಗಳ ಸಂಯೋಜನೆಯೂ ಇಲ್ಲಿ ಮುಖ್ಯ. ಸಾಹಿತಿಯಾದ ನಾನು ಸಿನಿಮಾ ಸೃಷ್ಟಿಯಲ್ಲಿ ಸಾಹಿತ್ಯದಿಂದ ದೂರ ನಿಂತು ನಿರೂಪಿಸುವ ಸವಾಲು ಇರುತ್ತದೆ. ಹಾಗೆಂದು ನಾನು ಸಾಹಿತಿ ಎಂಬುದನ್ನು ಪೂರ್ಣ ಮರೆಯುತ್ತೇನೆಂದೂ ಮರೆಯಬೇಕೆಂದೂ ಹೇಳಲಾರೆ. ಸಾಹಿತಿಯಾಗಿರುವುದೂ ಕೆಲವೊಮ್ಮೆ ಸಹಕಾರಿಯಾಗುತ್ತದೆ. ಸಾಹಿತ್ಯ ಕೃತಿಗಿಂತ ಭಿನ್ನ ಶಿಲ್ಪವನ್ನು ಸೃಷ್ಟಿಸುವ ಸವಾಲೂ ಇರುತ್ತದೆ. ನಾನು ನನ್ನದೇ ಸಾಹಿತ್ಯ ಕೃತಿಯನ್ನು ಸಿನಿಮಾ ರೂಪದಲ್ಲಿ ತರಲು ಹೊರಟಾಗ ಮೂಲ ಆಶಯವನ್ನು ಬಿಟ್ಟುಕೊಡದೆ 'ಮರುಸೃಷ್ಟಿ' ಕ್ರಿಯೆಯಲ್ಲಿ ತೊಡಗುತ್ತೇನೆ. ಸಾಹಿತ್ಯ ಕೃತಿಯನ್ನು ಕೆಲವು ಸಾರಿ ಓದಿ, ಅನಂತರ ಮುಚ್ಚಿಟ್ಟು, ನನ್ನ ಪಾಡಿಗೆ ನಾನು ಚಿತ್ರಕತೆ ರಚಿಸುತ್ತೇನೆ. ಹಾಗೆಂದು ನನ್ನ ಮೂಲ ಆಶಯವನ್ನು ಬದಲಾಯಿಸುವುದಿಲ್ಲ. ಸಾಹಿತ್ಯ ಮತ್ತು ಸಿನಿಮಾ ಎರಡೂ ಪ್ರಕಾರಗಳ ವಸ್ತುಗಳ ಆಯ್ಕೆ ಮತ್ತು ಆಶಯಗಳು ನನ್ನ ಸಾಮಾಜಿಕ ಕಾಳಜಿಯ ಕರುಳಿನ ಕಣ್ಣಾಗಿಯೇ ಇರುತ್ತವೆ.



ಬರಗೂರರೊಂದಿಗೆ ವಿಕ್ರಂ ವಿಸಾಜಿ

◆ **ಎಲ್ಲೊ ಕೇಳಿದ್ದುಂಟು, ನಿಮಗೆ ಎಂ.ಎಲ್.ಸಿ. ಆಗುವ ಅವಕಾಶ ಬಂದಿತ್ತು ಅಂತ. ಅದನ್ನು ನಿರಾಕರಿಸಲು ಇದ್ದ ತಾತ್ವಿಕ ಕಾರಣಗಳೇನು?**

ನೀವು ಕೇಳಿದ್ದು ನಿಜ ವಿಕ್ರಂ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭ. ಜೀವರಾಜ ಆಳ್ವ ಅವರು ಮಂತ್ರಿಯಾಗಿದ್ದರು. ನನಗೆ ತುಂಬಾ ಪರಿಚಿತರು. ಅವರೇ ಖುದ್ದಾಗಿ ನನ್ನಲ್ಲಿ, 'ಸಾಹೇಬ್ರನ್ನ ಒಪ್ಪಿಸಿದ್ದೇವೆ. ಆದ್ರೆ ಅವರು ಮೊದಲಿಗೆ 'ಬರಗೂರ್ ನನ್ನೂ ಟೀಕೆ ಮಾಡಿದಾರಲ್ರಿ' ಅಂದ್ರು. ಅನಂತರ ಚರ್ಚೆ ಮಾಡಿದಾಗ ಒಪ್ಪಿದ್ರು. ಇನ್ನೊಂದು ವಿಷಯ. ನಿಮ್ಮನ್ನು ಕೇಳೋಕ್ ಮುಂಚೆ ಇನ್ನೊಬ್ಬ ಸಾಹಿತಿಗಳನ್ನು ಕೇಳಿದ್ದುಂಟು. ಅದ್ರಲ್ಲಿ ಮುಚ್ಚುಮರೆ ಇಲ್ಲ. ಅವರು ಹಿಂಜರಿದ್ರು. ಈಗ ನಿಮ್ಮನ್ನು ಕೇಳ್ತಿದ್ದೇವೆ. ನಾಮಿನೇಟ್ ಮಾಡ್ತೇವೆ ಒಪ್ಪಿಕೊಳ್ಳಿ' ಎಂದು ಒತ್ತಾಯಿಸಿದರು. ನಾನು, 'ವಿಧಾನ ಪರಿಷತ್ತನ್ನು ಹಿರಿಯರ ಮನೆ ಅಂತಾರೆ, ನಾನು ಕಿರಿಯ. ನಿಜಕ್ಕೂ ಸಂಕೋಚ ಆಗುತ್ತೆ. ನಾನು ಒಪ್ಪಲ್ಲ' ಎಂದು ನಯವಾಗಿ ನಿರಾಕರಿಸಿದೆ. ಅದು 1985–86ನೇ ಇಸವಿ. ಜೀವರಾಜ ಆಳ್ವ ಮತ್ತು ಅಂದಿನ ಸರ್ಕಾರ ಹದಿನೈದು ದಿನ ಕಾದರೂ ನಾನು ಒಪ್ಪಲಿಲ್ಲ. ಅನಂತರ ನನಗಿಂತ ಕಿರಿಯರನ್ನು ನಾಮಿನೇಟ್ ಮಾಡಿದರು! ಇನ್ನೊಂದು ಸಾರಿ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಆಹ್ವಾನ ಬಂತು. ಆಗ ನಾಮಕರಣಗೊಂಡಿದ್ದ ವಿಧಾನ ಪರಿಷತ್ತಿನ ಸದಸ್ಯೆ ಬಿ.ಟಿ. ಲಲಿತಾನಾಯಕ ಅವರ ಅವಧಿ ಮುಗಿದಿತ್ತು. ಬಂಗಾರಪ್ಪನವರು ನನಗೆ ಫೋನ್ ಮಾಡಿ ಭೇಟಿಯಾಗಲು ಹೇಳಿದರು. ಹೋದೆ. ಅವರು ಇಪ್ಪತ್ತು ನಿಮಿಷ ನನ್ನ ಜೊತೆ ಮಾತಾಡಿದರು. 'ಎಂ.ಎಲ್.ಸಿ. ಆಗಲು ಒಪ್ಪಿಕೊಳ್ಳಿ' ಅಂದರು. ಆಗ ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದೆ. ನಾನು